

## ಫುಡ್‌ಪಾಂಡಾ



ಫುಡ್‌ಪಾಂಡಾ ಅಪ್ಲಿಕೇಶನ್‌ನಿಂದ ಬಳಕೆದಾರರು ತಮಗೆ ಇಷ್ಟವಾದ ತಿನಿಸುಗಳಿಗಾಗಿ ತಮ್ಮ ನೆಚ್ಚಿನ ಉಪಾಹಾರಗೃಹಗಳಿಗೆ ಬೇಡಿಕೆ ಸಲ್ಲಿಸಬಹುದು. ನಿಮಗೆ ಸಮೀಪವಿರುವ ಉಪಾಹಾರಗೃಹಗಳ ಸಂಪೂರ್ಣ ತಿನಿಸು– ಪಾನೀಯಗಳ ಪಟ್ಟಿಯನ್ನು ಈ ಅಪ್ಲಿಕೇಶನ್‌ನಿಂದ ನೋಡಬಹುದು. ಇದನ್ನು ಗೂಗ್ಲ್ ಪ್ಲೇ ಸ್ಟೋರ್‌ನಿಂದ ಉಚಿತವಾಗಿ ಡೌನ್‌ಲೋಡ್ ಮಾಡಬಹುದು. ಆ್ಯಂಡ್ರಾಯ್ಡ್ ಫೋನ್ ಬಳಕೆದಾರರಿಗೆ ಇದು ಉಪಾಹಾರಗೃಹಗಳು, ಅವುಗಳಲ್ಲಿ ಲಭ್ಯವಿರುವ ತಿನಿಸುಗಳ ಪಟ್ಟಿ, ಫೋನ್ ನಂಬರ್‌ಗಳನ್ನು ನೀಡುತ್ತದೆ. ರಿಯಾಯಿತಿ ಇದ್ದರೆ ಆ ಮಾಹಿತಿ ಕೂಡಾ ಲಭ್ಯ.

ನಗರ ಹಾಗೂ ನೀವಿರುವ ಪ್ರದೇಶವನ್ನು ಆಯ್ಕೆ ಮಾಡಿ. ಅಲ್ಲಿಗೆ ಸಮೀಪವಿರುವ ಉಪಾಹಾರಗೃಹಗಳ ಪಟ್ಟಿ ಕಾಣಿಸುತ್ತದೆ. ಉಪಾಹಾರಗೃಹ ಆಯ್ಕೆ ಮಾಡಿದರೆ ತಿನಿಸುಗಳ ಪಟ್ಟಿ ಕಾಣಿಸುತ್ತದೆ. ಅಂದರೆ ಸೂಪ್, ಮುಖ್ಯ ಊಟ ಮೊದಲಾದವು. ಅಲ್ಲಿ ಮತ್ತೆ ಉಪ ಪಟ್ಟಿಗಳಿದ್ದು ನಿಮ್ಮ ಬೇಡಿಕೆಯನ್ನು ಕ್ಲಿಕ್ ಮಾಡಬಹುದು. ಕೊನೆಗೆ ಪಾವತಿಗಾಗಿ ನಿಮ್ಮ ಕಾರ್ಡ್ ವಿವರ ನೀಡಿದರೆ ಸಾಕು.

ಈ ಅಪ್ಲಿಕೇಶನ್ ದೆಹಲಿ, ಚಂಡೀಗಢ, ಬೆಂಗಳೂರು, ಪುಣೆ, ಜೈಪುರ, ಮುಂಬೈ, ಹೈದರಾಬಾದ್ ನಗರಗಳಲ್ಲಿ ಜನಪ್ರಿಯವಾಗಿದ್ದು, 1800ಕ್ಕೂ ಅಧಿಕ ಉಪಾಹಾರಗೃಹಗಳ ಪಟ್ಟಿ ಲಭ್ಯವಿದೆ.

## ರೂಂ ಫಾರ್ ಸಿಇಟಿ 2013



ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಹಾಗೂ ಅದಕ್ಕಾಗಿ ಪೂರ್ವ ತಯಾರಿ ಮಾಡಿಕೊಳ್ಳಲು ವಿದ್ಯಾರ್ಥಿಗಳು ಹಾಗೂ ಪಾಲಕರಿಗೆ ನೆರವು ನೀಡುವ ಸಲುವಾಗಿ ಸಿಇಟಿ ರೂಂ ಎಂಬ ಮೊಬೈಲ್ ಅಪ್ಲಿಕೇಶನ್ ಅನ್ನು ಐಪೊಮೊ ಕಂಪನಿಯು ಕರ್ನಾಟಕದಲ್ಲಿ ಬಿಡುಗಡೆ ಮಾಡಿದೆ. ಈ ಕಂಪೆನಿಯನ್ನು ವಿಪ್ರೊದ ಮಾಜಿ ಹಿರಿಯ ಕಾರ್ಯನಿರ್ವಾಹಕರಾದ ಹರಿಪ್ರಕಾಶ ಶಾನುಭೋಗ್ ಹಾಗೂ ವಿದ್ಯಾಧರ ತಾಲ್ಯ ಆರಂಭಿಸಿದ್ದು, ಇನ್ಫೋಸಿಸ್‌ನ ಮಾಜಿ ಲೀಡರುಗಳಾದ ರಾಜೀವ್ ಕುಚ್ಚಲ್ ಹಾಗೂ ಸಂಜೀವ್ ಜೋಶಿ ಬೆನ್ನೆಲುಬಾಗಿ ಕೆಲಸ ಮಾಡುತ್ತಿದ್ದಾರೆ.

ಇದು ಸಿಇಟಿ 2013 ರೂಂ, ಅಪಿಕ್ಲೇಶನ್ 203 ಪಿಎಸ್‌ಐ, ರ‍್ಯಾಂಕ್ ಸೀಟ್ ಫೈಂಡರ್, ಕಾಲೇಜು ಮಾಹಿತಿ ಹಾಗೂ ಸಿಇಟಿ ಪ್ರಕಟಣೆಗಳನ್ನು ಹೊಂದಿದೆ. ರ‍್ಯಾಂಕ್–ಸೀಟ್ ಫೈಂಡರ್ ವಿದ್ಯಾರ್ಥಿಗಳ ಫಲಿತಾಂಶದ ಆಧಾರದ ಮೇಲೆ ಸೂಕ್ತ ಕೋರ್ಸು/ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ಹಾಗೂ ಕೌನ್ಸೆಲಿಂಗ್‌ಗೆ ಪೂರ್ವಸಿದ್ಧತೆ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಅಪಿಕ್ಲೇಷನ್ನಿನ ಕಾಲೇಜು ಇನ್ಫೋ ವಿಭಾಗವು ಅಭ್ಯರ್ಥಿಗಳಿಗೆ ವಿವಿಧ ಕಾಲೇಜುಗಳು, ಅವುಗಳಲ್ಲಿ ಲಭ್ಯವಿರುವ ಸೌಕರ್ಯಗಳ ಬಗ್ಗೆ ಮಾಹಿತಿ ಒದಗಿಸುತ್ತದೆ.

ಈ ಉಚಿತ ಅಪಿಕ್ಲೇಷನ್ ಡೌನ್‌ಲೋಡ್ ಮಾಡಿಕೊಳ್ಳಲು <ipomo> ಎಂದು ಟೈಪ್ ಮಾಡಿ 7259002341 ಸಂಖ್ಯೆಗೆ ಎಸ್‌ಎಂಎಸ್ ಕಳುಹಿಸಿ. ಐಪೊಮೊದಿಂದ ತಿರುಗಿ ಬರುವ ಎಸ್‌ಎಂಎಸ್ ಅಪಿಕ್ಲೇಶನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳುವ ಲಿಂಕನ್ನು ಹೊಂದಿರುತ್ತದೆ.

ಅದರಲ್ಲಿ ನಮೂದಿಸಲಾದ ಜಾಲತಾಣದ ಮೇಲೆ ಕ್ಲಿಕ್ ಮಾಡಿದರೆ ಅಪ್ಲಿಕೇಶನ್ ಡೌನ್‌ಲೋಡ್ ಆಗುತ್ತದೆ.

## ಫೋಟೊ ಎಡಿಟಿಂಗ್




ವೆಬ್ ಆಧಾರಿತ ಫೋಟೊ ಎಡಿಟಿಂಗ್‌ಗೆ ಮೊಝಿಲ್ಲಾ ಎಎಸ್ ಎಂ.ಜೆಎಸ್ ಟೂಲ್ ಅನ್ನು ಬಿಡುಗಡೆ ಮಾಡಿದೆ. ದುಬಾರಿ ಕ್ಯಾಮೆರಾಗಳಲ್ಲಿ ಲಭ್ಯ ಇರುವ ಕಚ್ಚಾ ಫೋಟೊ ಗುಣಮಟ್ಟ ಚೆನ್ನಾಗಿರುತ್ತದೆ ಹಾಗೂ ಎಡಿಟಿಂಗ್‌ಗೆ ಸಾಕಷ್ಟು ಅವಕಾಶಗಳು ಇರುತ್ತವೆ. ಆದರೆ ಜೆಪಿಇಜಿ ರೂಪದಲ್ಲಿರದೆ ಕಂಪ್ಯೂಟರ್‌ಗೆ ಡಿಕೋಡ್ ಮಾಡಲು ಕಷ್ಟವಾಗುತ್ತದೆ.

ಈ ನಿಟ್ಟಿನಲ್ಲಿ ವೆಬ್ ಆಧಾರಿತ ಅಪ್ಲಿಕೇಶನ್ ವೆಬ್‌ರಾ ಬಿಡುಗಡೆಯಾಗಿದ್ದು ಇದರಿಂದ ಎಎಸ್‌ಎಂ.ಜೆಎಸ್ ತಂತ್ರಜ್ಞಾನವನ್ನು ಬಳಸಿ ಫೋಟೊ ಎಡಿಟಿಂಗ್ ಮಾಡಬಹುದು. ಇದಕ್ಕೆ ಅಡೋಬ್‌ನ ಲೈಟ್‌ರೂಂ ಅಥವಾ ಆ್ಯಪಲ್‌ನ ಅಪರ್ಚರ್ ಅಗತ್ಯವಿಲ್ಲ. ಇದು ಸಿ ಅಥವಾ ಸಿ ಡಬಲ್ ಪ್ಲಸ್‌ನಲ್ಲಿ ಬರೆದ ಪ್ರೋಗಾಮನ್ನು ಜಾವಾಸ್ಕ್ರಿಪ್ಟ್‌ಗೆ ಬದಲಾಯಿಸುತ್ತದೆ. ನಿಕಾನ್ ಡಿ800 ಕ್ಯಾಮೆರಾದಲ್ಲಿ ತೆಗೆದ 40 ಎಂಬಿಯಷ್ಟಿರುವ ಕಚ್ಚಾ ಫೋಟೊವನ್ನು ಕೂಡಾ ಕೆಲವೇ ಸೆಕೆಂಡುಗಳಲ್ಲಿ ಇದು ಡಿಕೋಡ್ ಮಾಡುತ್ತದೆ. ಫೈರ್‌ಫಾಕ್ಸ್‌ನ ಹೊಸ ಆವೃತ್ತಿಯಲ್ಲಿ ಇದು ಬಿಲ್ಟ್‌ಇನ್ ಅಪ್ಲಿಕೇಶನ್ ಆಗಿ ಲಭ್ಯ.



## ಆಟೋ ಸೇವ್

ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿ ಯಾವುದೇ ವಿಷಯವನ್ನು ಟೈಪ್ ಮಾಡುತ್ತಿದ್ದಾಗ 'ಎರರ್' ಬಂದರೆ ಇಡೀ ಫೈಲ್ ಡಿಲೀಟ್ ಆಗುವ ಸಾಧ್ಯತೆ ಹೆಚ್ಚು. ಹೀಗಾಗಿ ಒಎಸ್ ಎಕ್ಸ್‌ನ 'ಆಟೋ ಸೇವ್' ಮತ್ತು 'ರೆಸ್ಯೂಮ್' (ಕಳೆದುಹೋದ ಫೈಲ್ ಮತ್ತೆ ಪಡೆಯುವ) ವಿಶೇಷವಾಗಿ ನಿಮ್ಮ ಕಾರ್ಯ ಅಡೆತಡೆಯಿಲ್ಲದೆ ನಡೆಯುವಂತೆ ಮಾಡುತ್ತವೆ. ಮಧ್ಯೆ ವಿದ್ಯುತ್ ಕೈ ಕೊಟ್ಟಾಗ ಅಥವಾ 'ಕ್ರ್ಯಾಷ್' ಆದಾಗಲೂ ನೀವು ಚಿಂತಿಸುವ ಅಗತ್ಯವಿಲ್ಲ.

■ ಎಸ್. ತುಂಬೆ